**ದಿನಾಂಕಃ 24.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ 4 ನೇ ಪ್ರತಿವಾದಿ ಪರ ಡಿಎಸ್ ಬಿ ವಕೀಲರಿಂದಃ**

ನನ್ನ ಅಜ್ಜಿ ನಂಜಮ್ಮ ನಮ್ಮ ಜೊತೆಯಲ್ಲಿ ವಾಸವಾಗಿದ್ದರು. ನಾನು ನನ್ನ ಅಮ್ಮ, ನನ್ನ ಅಜ್ಜಿ ಒಟ್ಟಿಗೆ ವಾಸವಾಗಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಜ್ಜಿ ಒಟ್ಟಿಗೆ ವಾಸವಾಗಿದ್ದೆವು. 2013 ರಿಂದ 2018 ರವರೆಗೆ ನನ್ನ ಅಜ್ಜಿ ನನ್ನ ಜೊತೆಗೆ ವಾಸವಾಗಿದ್ದರು . ಆ ಸಮಯದಲ್ಲಿ ನಾನು ಅಪ್ರಾಪ್ತವಾಗಿದ್ದೆ ಎಂದರೆ ಸರಿ. ಆ ಸಂದರ್ಬದಲ್ಲಿ ದುಡಿಮೆ ಯಾರು ಮಾಡುತ್ತಿದ್ದರು, ಜಮೀನನ್ನು ನಾನು ಮತ್ತು ನನ್ನ ಅಜ್ಜಿ ನೋಡಿಕೊಳ್ಳುತ್ತಿದ್ದೆವು. 2 ನೇ ಪ್ರತಿವಾದಿ ನನ್ನ ತಾಯಿ ಅವರು ಎಲ್ಲಿ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಯ ಸ್ವಯಾರ್ಜಿತ ಆಸ್ತಿ ದಾವಾ ಶೆಢ್ಯೂಲ್ ಸ್ವತ್ತು ಆಗಿರುತ್ತದೆ .ನನ್ನ ಅಜ್ಜಿ ನನ್ನ ತಾಯಿಗೆ 2013 ರಲ್ಲಿ ಒಂದು ನೋಂದಾಯಿತ ದಾನಪತ್ರ ವನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ದಾನಪತ್ರ ಬರೆದ ಮೇಲೆ ಆ ಹಕ್ಕು ಸ್ವಾದೀನತೆಯೆಲ್ಲಾ 2 ನೇ ಪ್ರತಿವಾದಿಯಾದ ನನ್ನ ತಾಯಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ಖಾತೆ ಎಲ್ಲಾ ನನ್ನ ತಾಯಿಯಾದ 2 ನೆ ಪ್ರತಿವಾದಿಗೆ ಬಂದಿರುತ್ತದೆ ಆದ್ದರಿಂದ ಅವರು ಸಂಪೂರ್ಣ ಮಾಲೀಕತ್ವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. 4

ನೇ ಪ್ರತಿವಾದಿ ಕ್ರಯದ ಕರಾರುಪತ್ರವನ್ನು ನನ್ನ ತಾಯಿಯ ಬಳಿ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ದಾವಾ ಸ್ವತ್ತಿನ ಹಕ್ಕು ಅಧಿಕಾರ 4 ನೇ ಪ್ರತಿವಾದಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರದ ಮಾಡಿದ ಮೇಲೆ 2 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಿಕೊಡಲಿಲ್ಲ ಎಂದು 4 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ತಿಳುವಳಿಕೆ ಪತ್ರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ 2 ನೇ ಪ್ರತಿವಾದಿ ಮರುತ್ತರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಮರುತ್ತರದಲ್ಲಿ ಕರಾರುಪತ್ರದ ಬಗ್ಗೆ ಒಪ್ಪಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಪುನಃ ನನ್ನ ತಾಯಿಯವರು ನನ್ನ ಅಜ್ಜಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಪುನಃ ದಾನಪತ್ರ ಮಾಡಿಕೊಡಲು ನನ್ನ ತಾಯಿಯವರಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ 2 ನೇ ಪ್ರತಿವಾದಿ ವಿರುದ್ಧ ಗೌಃ 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅ ದಾ 71/2019 ರ ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾವೆಲ್ಲರೂ ಸೇರಿ ಮರಣ ಶಾಸನ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಂಜಮ್ಮ ರವರಿಗೆ ದಾವಾ ಸ್ವತ್ತಿನ ಬಗ್ಗೆ ವಿಲ್ ಮಾಡಲು ಯಾವುದೇ ಹಕ್ಕು ಅಧಿಕಾರ ಮಾಲೀಕತ್ವ ಇರಲಿಲ್ಲ ಎಂದರೆ ಸರಿಯಲ್ಲ. ಮರಣಶಾಸನ ಪತ್ರ ಕಾನೂನಿನ ಪ್ರಕಾರ ಊರ್ಜಿತವಾಗುವಂತಹದ್ದು ಅಲ್ಲ ಎಂದರೆ ಸರಿಯಲ್ಲ. ಈ ಕೇಸಿನ ನನ್ನ ವಕೀಲರು ಗೌಃ 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅ ದಾ 71/2019 ರಲ್ಲಿ ನನ್ನ ಅಜ್ಜಿ ಮತ್ತು ನನ್ನ ತಾಯಿಯ ಪರವಾಗಿ ವಕಲಾತ್ತು ಹಾಗೂ ಪ್ರತಿವಾದಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ ಎರಡೂ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ಸಂಪೂರ್ಣ ಮಾಲೀಕತ್ವ ಹಾಗೂಅಧಿಕಾರ ಹೊಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ

ನಾನು ಸುಳ್ಳು ಪ್ರತಿಪಾದನೆ ಮಾಡಿ , ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಠಾಣೆಯಲ್ಲಿ ಮಾಡಿದಂತಹ ಹಿಂಬರಹವನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ನಾನು ವಿಲ್ ನ್ನು ಬರಸಿಕೊಂಡಿದ್ದು ಹಾಗೂ ನನ್ನ ತಾಯಿ ನನ್ನ ಅಜ್ಜಿಗೆ ದಾನಪತ್ರ ಬರೆದಿದ್ದು ಇವೆಲ್ಲವೂ ಕೂಡ ಸೃಷ್ಟಿ ಮಾಡಿದಂತಹ ದಾಖಲಾತಿ ಎಂದರೆ ಸರಿಯಲ್ಲ. ಆಸ್ತಿಯನ್ನು ಹಣ ಖರ್ಚು ಮಾಡಿ ಅಬಿವೃದ್ಧಿ ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸನವರ ಹತ್ತಿರ ದೂರು ನೀಡಿ ಯಾವುದೇ ಪ್ರಯೋಜನವಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ಬರೆಯಲು ನಂಜಮ್ಮ ನಿಗೆ ಯಾವುದೇ ಹಕ್ಕುಅಧಿಕಾರ ಮಾಲೀಕತ್ವ ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ ನಾನುಕೇಸಿನಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ರಿಂದ 3 ನೇ ಪ್ರತಿವಾದಿಗಳು ಸೇರಿ ಈ ಸುಳ್ಳು ಕೇಸನ್ನು ಹಾಕಿ ಸುಳ್ಳು ದಾಖಲೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ